ಓ ಎಸ್ಃ 577/14

ಡಿ ಡಬ್ಲ್ಯೂ ಃ 5

ದಿನಾಂಕಃ 06.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎ ಹೆಚ್ ವಕೀಲರಿಂದಃ

ದಾವಾ ಸ್ವತ್ತುಗಳು ಮೂಲತಃ ನನ್ನ ತಾತ ರೇವಯ್ಯರವರಿಗೆ ಸೇರಿದ ಸ್ವತ್ತುಗಳಾಗಿರುತ್ತವೆ. ರೇವಯ್ಯರವರಿಗೆ 4 ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಶಿವಮ್ಮ ಅಂದರೆ ಪ್ರತಿವಾದಿ 7ರವರು ಹೊರತುಪಡಿಸಿ ಇನ್ನುಳಿದವರು ಕಾಲವಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ ನ್ಯಾಯಾಲಯಕ್ಕೆ ನಿಡಿ 10ರಂತೆ ರೇವಯ್ಯರವರಿಗೆ ಸಂಬಂದಪಟ್ಟ ವಂಶವೃಕ್ಷವನ್ನು ಹಾಜರುಪಡಿಸಿರುವುದು ನಾನು ಈಗ ನೋಡುತ್ತಿದ್ದು ಸದರಿ ವಂಶವೃಕ್ಷ ಸರಿಯಾಗಿರುತ್ತದೆ. ರೇವಯ್ಯರವರ ಮಕ್ಕಳಾದ ರಾಮಲಿಂಗಯ್ಯ, ಜುಂಜಯ್ಯ ಮತ್ತು ಪ್ರತಿವಾದಿ 7ರವರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ.

ಈ ದಾವೆಯ ಬಗ್ಗೆ ನನಗೆ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿ ನನ್ನ ಅಣ್ಣನವರಾದ ನಾಗರಾಜುರವರ ಕಡೆಯಿಂದ ಗೊತ್ತಾಯಿತು. ನಾಗರಾಜು ಮತ್ತು ನನ್ನ ತಂದೆ ಒಟ್ಟಿಗೆ ಇರುತ್ತಾರೆ ಎಂದರೆ ಸರಿ. ನನ್ನ ತಂದೆಯವರು ನನ್ನನ್ನು ಈ ದಾವೆಯಲ್ಲಿ ಪಕ್ಷಗಾರರು ಆಗಲು ನನ್ನನ್ನು ಕಳುಹಿಸಿರುತ್ತಾರೆ ಎಂದರೆ ಸಾಕ್ಷಿ ಸರಿ ಎಂದು ನುಡಿಯುತ್ತಾರೆ. ವಿಭಾಗ ಆಗಿರುತ್ತದೆ ಎಂದು ನಾನು ಹೇಳಿರುವುದಕ್ಕೆ ಪೂರಕವಾಗಿ ನಾನು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ ಅದನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನನಗೆ ಈ ದಾವೆಯ ಬಗ್ಗೆ ಏನು ಗೊತ್ತಿಲ್ಲದೇ ಇದ್ದರೂ ನನ್ನ ತಂದೆಯವರೇ ಎಲ್ಲಾ ಮಾಹಿತಿಯನ್ನು ನೀಡಿ ಈ ದಾವೆಯನ್ನು ನಡೆಸಲು ಕಳುಹಿಸಿರುತ್ತಾರೆ ಎಂದರೆ ಸರಿ. ನನಗೆ ನನ್ನ ಲಿಖಿತ ಹೇಳಿಕೆ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಬದಲಾಗಿ ನನ್ನ ತಂದೆಯವರೇ ಅದನ್ನು ನನಗೆ ಹೇಳಿ ತಿಳಿಸಿದ ಮೇರೆಗೆ ನಾನು ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿ.

ನಾನು ಕಳೆದ 20 ವರ್ಷಗಳಿಂದ ಕನಕಪುರ ರಸ್ತೆಯಲ್ಲಿ ವಾಸವಾಗಿರುತ್ತೇನೆ. ನಾನು 1986ರಲ್ಲಿ ಹುಟ್ಟಿದ್ದು ನಾನು ಹುಟ್ಟುವ ಮುಂಚೆ 1975ರಲ್ಲಿ ಆಗಿರುವ ವಿಭಾಗದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ನಾನು ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಶಿವಮ್ಮರವರಿಗೆ ಸದರಿ ವಿಭಾಗದಲ್ಲಿ ಭಾಗ ನೀಡಲಾಗಿರುತ್ತದೆಯೋ ಎಂದರೆ ಶಿವಮ್ಮರವರಿಗೆ ಭಾಗ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ಶಿವಮ್ಮರವರಿಗೆ ಯಾವುದೇ ಭಾಗ ನೀಡಿಲ್ಲ ಎಂದರೆ ಸಾಕ್ಷಿ ಅವರಿಗೆ ಭಾಗ ಕೊಟ್ಟು ಒಡವೆ ನೀಡಿ ಮದುವೆ

ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಭಾಗದ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸಾಕ್ಷಿಗೆ ನಿಡಿ 7ನ್ನು ತೋರಿಸಲಾಗಿ ಸದರಿ ವಿಭಾಗ ಪತ್ರದಲ್ಲಿ ಶಿವಮ್ಮರವರಿಗೆ ಭಾಗ ಕೊಡಲಾಗಿದೆಯೋ ಎಂದರೆ ಶಿವಮ್ಮರವರಿಗೆ ಭಾಗ ನೀಡಿದ ಪತ್ರ ಇರುವುದಿಲ್ಲ ಅವರಿಗೆ ಮೌಖಿಕವಾಗಿ ಭಾಗ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ಮದುವೆ 2005ರಲ್ಲಿ ಆಗಿರುತ್ತದೆ. ನನ್ನ ಮತ್ತು ನನ್ನ ಅಣ್ಣ ತಮ್ಮಂದಿರ ಮದ್ಯೆ ಯಾವುದೇ ಭಾಗ ಆಗಿರುವುದಿಲ್ಲ. ನನಗೆ ಒಡವೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ಅರ್ಧ ಹಣವನ್ನು ನನ್ನ ಮದುವೆಗೆ ಖರ್ಚು ಮಾಡಿದ್ದರು ಮತ್ತು ನನ್ನ ಗಂಡನ ಮನೆಯವರು ಅರ್ಧ ಹಣವನ್ನು ಖರ್ಚು ಮಾಡಿದ್ದರು ಮತ್ತು ನನ್ನ ತಂದೆ ಭಾಗ ಕೊಡುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಭಾಗ ಆಗಿರುತ್ತದೆ ಎಂದು ಯಾವುದೇ ಪಕ್ಷಗಾರರು ನ್ಯಾಯಾಲಯದ ಮುಂದೆ ಹೇಳಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನನಗೆ ಏನೇ ಭಾಗ ಬರಬೇಕಾದರೂ ನನ್ನ ತಂದೆಯ ಭಾಗದಲ್ಲಿ ಬರಬೇಕು ಎಂದರೆ ಸರಿ. 1975ರಲ್ಲಿ ಭಾಗ ಆಗಿರುವುದಕ್ಕೆ ಖಾತೆ ಬದಲಾವಣೆ ಆಗಿರುವುದನ್ನು ಸೂಚಿಸಲು ಕಂದಾಯ ದಾಖಲಾತಿಗಳು ಇರುತ್ತವೆ.

ಈ ಹಂತದಲ್ಲಿ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**